ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಇ) ಸರ್ಕಾರವು ಮಂಡಳಿಗೆ ಪ್ರಸಕ್ತ ಸಾಲಿನಲ್ಲಿ ನಿಗಧಿಪಡಿಸಲಾಗಿರುವ 1837.50 ಲಕ್ಷ ರೂ.ಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಮೇಲ್ಕಂಡ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಹಣವನ್ನು ಕಾಯ್ದಿರಿಸಲು ಕ್ರಮ ಕೈಗೊಳ್ಳಲಾಗುವುದು.

ವಿಷಯ: ಗೋಕಾಕ್ ಎಪಿಎಂಸಿ ಸ್ಥಳದ ಬಗ್ಗೆ.

1111 (1651)

ಶ್ರೀ ಚಂದ್ರಶೇಖರ್ ನಾಯಕ್ (ಗೋಕಾಕ್): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ್ ಎ.ಪಿ.ಎಂ.ಸಿ. ಜಾಗವನ್ನು (3 ಎಕರೆ) ಕೆ.ಇ.ಬಿ.ಗೆ (110ಕೆ.ವಿ) ಒದಗಿಸುವ ಕಾರ್ಯ ಯಾವ ಹಂತದಲ್ಲಿದೆ,

ಆ) ಗೋಕಾಕ್ ಬಸ್ ನಿಲ್ದಾಣಕ್ಕೆ ನಿಗದಿತ ಸ್ಥಳದಲ್ಲಿ ಒದಗಿಸಲಾದ ಸ್ಥಳವೆಷ್ಟು;

ಇ) ಗೋಕಾಕ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಇನ್ನೂ ಉಳಿದ ನಿವೇಶನ ಎಷ್ಟು?

ಶ್ರೀ ಹೆಚ್.ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಕರ್ನಾಟಕ ವಿದ್ಯುತ್ ಮಂಡಳಿ (ಕೆ.ಇ.ಬಿ) ಅವರಿಗೆ ಈಗಾಗಲೇ 2 ಎಕರೆ ಜಮೀನನ್ನು ನೀಡಲಾಗಿದ್ದು, ಹೆಚ್ಚುವರಿ ಜಮೀನನ್ನು ನೀಡಲು ಸಾಧ್ಯವಾಗುವುದಿಲ್ಲ.

ಆ) ಗೋಕಾಕ್ ಎ.ಪಿ.ಎಂ.ಸಿ ಪ್ರಾಂಗಣದಲ್ಲಿ ಯಾವುದೇ ಸ್ಥಳವನ್ನು ಒದಗಿಸಿರುವುದಿಲ್ಲ.

ಇ) ಪ್ರಸಕ್ತ ಮಾರುಕಟ್ಟೆ ಪ್ರಾಂಗಣದಲ್ಲಿ 40 X 120 ಅಳತೆಯ 97 ನಿವೇಶನಗಳು ಖಾಲಿ ಇವೆ.

ವಿಷಯ: ಸಹಕಾರ ಸಂಘಗಳಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರು.

1112 (1564)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?